# IV ನೇ ಹೆಚ್ಚುವರಿ ನ್ಯಾಯಾಲಯ ಹಾಗೂ ಜೆ ಎಮ್ ಎಫ್ ಸಿ, ಬೆಳಗಾವಿ

OS.No.643/2017

DW-1

**ಪ್ರಮಾಣ ವಚನ ಬೋಧಿಸಿದ ದಿನಾಂಕಃ 07-02-2023.**

ಪಾಟೀ ಸವಾಲು ವಾದಿಪರ ವಕೀಲರು ಶ್ರೀ. AAK ರವರಿಂದ.

ವಾದಿ ಎಷ್ಟು ವರ್ಷಗಳಿಂದ ಪರಿಚಯ ಎಂದರೆ ಸಾಕ್ಷಿ ಊರಿನವರಾದ ಕಾರಣ ಪರಿಚಯ ಎನ್ನುತ್ತಾರೆ. ನಾನು ಸಣ್ಣವನು ಇದ್ದಾಗಿನಿಂದ ಕಲಕಾಂಬ ಗ್ರಾಮದಲ್ಲಿ ವಾಸಿಸುತಿರುತ್ತೇನೆ. ವಾದಿ ಹುಟ್ಟಿದಾಗಿನಿಂದ ಕಲಕಾಂಬದಲ್ಲಿ ವಾಸಿಸುತ್ತಿರುತ್ತಾನೆ ಎಂದರೆ ಸಾಕ್ಷಿ ಇರಬಹುದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಮ್ಮ ಮತ್ತು ವಾದಿಯ ಮನೆಯ ನಡುವಿನ ಅಂತರ ಎಷ್ಟು ಇರುತ್ತದೆ ಎಂದರೆ ಸಾಕ್ಷಿ 200,300,400 ಮತ್ತು 500 ಇರಬಹುದು. ನಿಮ್ಮ ಮತ್ತು ಅವರ ಮನೆಯ ನಡುವೆ ಅಂತರ ಅಂದಾಜು 100 ರಿಂದ 200 ಮೀ ಇರುತ್ತದೆ ಎಂದರೆ ಸಾಕ್ಷಿ ಇಲ್ಲ ಅಂದಾಜು 400 ರಿಂದ 500 ಇರುತ್ತದೆ ಎನ್ನುತ್ತಾರೆ. ನೀವು 400-500 ಮೀಟರ್ ಅಂತರ ಇದೆ ಎಂದು ಸುಳ್ಳು ಹೇಳುತಿದ್ದೀರಿ ಎಂದರೆ ಸರಿಯಲ್ಲ. ವಾದಿಗೆ ಕಲಕಾಂಬ ಗ್ರಾಮದಲ್ಲಿ ಸಾಕಷ್ಟು ಜಮೀನುಗಳು ಇರುತ್ತವೆ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ವಾದಿಗೆ ಕಲಕಾಂಬದಲ್ಲಿ 7 ರಿಂದ 8 ಎಕರೆ ಜಮೀನು ಇರುತ್ತದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ವಾದಿ ತಮ್ಮ ಹೊಲದಲ್ಲಿ ಕಾಯಿಪಲ್ಯ, ಭತ್ತ ಬೆಳೆಯಎತ್ತಾರೆ ಎಂದರೆ ಸಾಕ್ಷಿ ಅವರ ಹೊಲದಲ್ಲಿ ಬೆಳೆಯುತ್ತಿರಬಹುದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿಯವರು ಕಾಯಿಪಲ್ಯ, ಭತ್ತ ಮಾರಾಟ ಮಾಡುವುದರಿಂದ ಸಾಕಷ್ಟು ಆದಾಯ ಇದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಊರಿನಲ್ಲಿ ವಾದಿಗೆ ಎರಡು ಮಹಡಿಯ ದೊಡ್ಡ ಆರ್ಸಿಸಿ ಮನೆ ಇದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ವಾದಿರವರ ಹೆಸರಿನಲ್ಲಿ ಕಾರುಗಾಡಿ ಮತ್ತು ಮೊಟರ್ ಸೈಕಲ್, ಪವರ್ ಟಿಲ್ಲರ್ ಇರುತ್ತದೆ ಎಂದರೆ ಸಾಕ್ಷಿ ಅವುಯಾವುವು ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಾವಾಸ್ವತ್ತಿನ ಸರ್ವೆ ನಂ.87. ಪೂರ್ವಕ್ಕೆ ವಾದಿಯ ಜಮೀನು ಇರುತ್ತದೆ. ಪಶ್ಚಿಮಕ್ಕೆ ಲಕ್ಷ್ಮಣ ಪಾಟೀರ ಸ್ವತ್ತು ಸಾಕ್ಷಿ ಮುಂದುವರೆದು ನನಗೆ ಉತ್ತರ ದಕ್ಷಿಣ ದಿಕ್ಕು ಗೊತ್ತಾಗುವುದಿಲ್ಲ ಹಾಗೆ ಹೇಳುತ್ತೇನೆ ಎನ್ನುತ್ತಾರೆ. ಆರ್ ಎಸ್ 87 ರಲ್ಲಿ ನನ್ನ ಪಾಲಿಗೆ 16 ಗುಂಟೆ 10 ಅಣೆ ಇರುತ್ತದೆ. ಸದರಿ ಸ್ವತ್ತು ನನ್ನ ಪಾಲಿಗೆ ನನ್ನ ಅಣ್ಣತಮ್ಮಂದಿರೊಂದಿಗೆ ಆದ ವಿಭಾಗದಿಂದ ಬಂದಿದೆ. ನೀವು 2008 ರಲ್ಲಿ ಬರವಣಿಗೆ ಮೂಲಕ ವಿಭಾಗ ಮಾಡಿಕೊಂಡಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಬಾಯಿ ಮಾತಿನ ಮೂಲಕ ಮಾಡಿಕೊಂಡಿರುತ್ತೇವೆ ವಿಭಾಗವಾಗಿ 30-40 ವರ್ಷಗಳಾಗಿರುತ್ತವೆ

ಎನ್ನುತ್ತಾರೆ. ಸದರಿ ವಿಭಾಗದಂತೆ ನೀವು ತಾಶೀಲ್ದಾರವರಿಗೆ ವರದಿ ನೀಡಿ ನಿಮ್ಮ ಹೆಸರಿಗೆ ಮಾಡಿಕೊಂಡಿರುತ್ತೀರಿ ಎಂದರೆ ಸಾಕ್ಷಿ ನಮ್ಮ ಹೋಲವನ್ನು ನಮ್ಮ ಹೆಸರಿಗೆ ಮಾಡಿಕೊಂಡಿರುತ್ತೇವೆ ಅದಕ್ಕೂ ಪೂರ್ವದಲ್ಲಿ ನಮ್ಮ ಅಣ್ಣನ ಹೆಸರಿನಲ್ಲಿ ಇರುತ್ತದೆ ಎನ್ನುತ್ತಾರೆ. ನಿಮ್ಮ ಅಣ್ಣನ ಹೆಸರಿನಲ್ಲಿರುವ ಜಮೀನನ್ನು ನಿಮ್ಮ ಹೆಸಗಿರಿಗೆ ಯಾವಾಗ ಮಾಡಿಕೊಂಡಿರುತ್ತೀರಿ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. 2008 ರಲ್ಲಿ ವಿಭಾಗ ಮಾಡಿಕೊಂಡು ನಿಮ್ಮ ಹೆಸರಿಗೆ ಹಚ್ಚಿ ಕೊಂಡಿರುತ್ತೀರಿ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ನಾವು ಪಾಲು ಮಾಡಿಕೊಂಡು 30 ವರ್ಷಗಳಾಯಿತು ಎನ್ನುತ್ತಾರೆ.

2. ಸಾಕ್ಷಿಗೆ ತಾನು ಸಲ್ಲಿಸಿದ ಮುಖ್ಯ ವಿಚಾರಣೆಯನ್ನು ತೋರಿಸುತಿದ್ದು ಅದರಲ್ಲಿ ಸಹಿಯನ್ನು ನೀವು ಮಾಡಿರುತ್ತೀರಿ ಎಂದರೆ ಸಾಕ್ಷಿ ನಾನು ಮಾಡಿರುವುದಿಲ್ಲ ಎನ್ನುತ್ತಾರೆ. ಸಾಕ್ಷಿಗೆ ವಕಾಲತನ್ನು ತೋರಿಸುತಿದ್ದು ಸದರಿ ವಕಾಲತ್ತಿನಲ್ಲಿರುವ ಸಹಿ ನಿಮ್ಮದೆಯ ಎಂದರೆ ಸಾಕ್ಷಿ ಸದರಿ ಸಹಿಯನ್ನು ತನ್ನದು ಎಂದು ಒಪ್ಪಿಕೊಂಡ ಮೇರೆಗೆ ಸದರಿ ಸಹಿಯನ್ನು ನಿಪಿ. 17 ಎಂದು ಗುರುತಿಸಲಾಯಿತು. ನಿಮ್ಮ ಪ್ರತಿವಾದ ಪತ್ರದಲ್ಲಿ ನೀವು ಸೊಸೈಟಿಗೆ ಸಾಲ ಪಡೆಯಲು ಹೋಗಿದ್ದೀರಿ ಎಂದು ಹೇಳಿದ್ದು ಅದಕ್ಕೆ ಸಂಬಂಧಿಸಿದಂತೆ ದಾಖಲೆಯನ್ನು ಹಾಜರು ಪಡಿಸಿರುತ್ತೀರ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ದಾವಾಸ್ವತ್ತಿಗೆ ಸಂಬಂಧಿಸಿದಂತೆ ನಿಮ್ಮ ಹೆಸರನ್ನು ಹಚ್ಚಿಕೊಳ್ಳುವ ಸಮಯದಲ್ಲಿ ನಿಮ್ಮ ಅಡ್ಡ ಹೆಸರು ಅಷ್ಟಗಿ ಬದಲಾಗಿ ಅಳಗುಂಡಿ ಎಂದು ಬರೆದಿದ್ದರು ಎಂದರೆ ಸರಿ. ಸದರಿ ತಪ್ಪನ್ನು ಸರಿಪಡಿಸಲು ನೀವು ಅರ್ಜಿ ನೀಡಿರುತ್ತೀರಿ ಎಂದರೆ ಸಾಕ್ಷಿ ನಮ್ಮದು ನಾವು ಸರಿ ಮಾಡಿಕೊಂಡಿರುತ್ತೇವೆ ಎನ್ನುತ್ತಾರೆ. ಸದರಿ ಅಡ್ಡ ಹೆಸರಿನಲ್ಲಾಗಿರುವ ತಪ್ಪನ್ನು 2016-17 ರಲ್ಲಿ ಸರಿ ಪಡಿಸಲಾಗಿರುತ್ತದೆ ಎಂದರೆ ಸರಿ. ದಿನಾಂಕಃ 24-05-2017 ರಂದು ವಾದಿ ನಿಮಗೆ ನೋಟಿಸನ್ನು ನೀಡಿರುತ್ತಾರೆ ಎಂದರೆ ಸಾಕ್ಷಿ ನಮಗೆ ನೋಟಿಸ್ ಬಂದಿರುವುದಿಲ್ಲ ಎನ್ನುತ್ತಾರೆ. ನೀವು ಸಗದರಿ ನೋಟಿಸನ್ನು ಪಡೆದುಕೊಳ್ಳಲು ನಿರಾಕರಿಸಿದ ಕಾರಣ ನೋಟಿಸನ್ನು ತೆಗೆದುಕೊಂಡಿರುವುದಿಲ್ಲ ಎಂದು ಶರಾ ಬರೆದು ವಾಪಸ್ಸು ಕಳುಯಿಸಿರುತ್ತಾರೆ ಎಂದರೆ ಸಾಕ್ಷಿ ನಮಗೆ ನೋಟಿಸ್ ಬಂದಿರುವುದಿಲ್ಲ ಎನ್ನುತ್ತಾರೆ. ನಿಮಗೆ ನೋಟಿಸ್ ಬಂದಿದ್ದರು ನೀವು ಸದರಿ ನೋಟಿಸನ್ನು ತೆಗೆದುಕೊಳ್ಳದೆ ವಾಪಸ್ಸು ಕಳುಯಿಸಿದ್ದರು ಸಹ ನೋಟಿಸ್ ಬಂದಿರುವುದಿಲ್ಲ ಎಂದು ಸುಳ್ಳು ಹೇಳುತಿದ್ದೀರಿ ಎಂದರೆ ಸರಿಯಲ್ಲ. ಸದರಿ ನೋಟಿಸಿನಂತೆ ನಿಮಗೆ ಕರಾರಿನಂತೆ ಕ್ರಯಪತ್ರ ಮಾಡಿಕೊಡಲು ಕೇಳಿದ್ದರು ಎಂದರೆ ಸರಿಯಲ್ಲ. ವಾದಿ ಮತ್ತು ನಿಮ್ಮ ನಡುವೆ 2017 ರಲ್ಲಿ ಜಮೀನಿಗೆ ಕ್ರಯಪತ್ರ ಬರೆದುಕೊಡುವಂತೆ ಜಗಳವಾದ ಕಾರಣ ನೀವು ಎಂ ಎಲ್ ಎ ಜಾರಕೀಹೋಳಿ ಬಳಿ

ಹೋಗಿದ್ದೀರಿ ಎಂದರೆ ಸರಿಯಲ್ಲ. ಅದಕ್ಕೆ ಸಂಬಂಧಿಸಿದಂತೆ ಪೋಲಿಸ್ ಠಾಣೆಗೂ ಸಹ ಹೋಗಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ವಿರುದ್ಧ ವಾದಿ ಪೋಲಿಸರಿಗೆ ದೂರು ನೀಡಿದ್ದರು ಎಂದರೆ ಸರಿಯಲ್ಲ.

ಪ್ರತಿವಾದಿ ಪರ ವಕೀಲರ ವಿನಂತಿ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾ ಸಾಕ್ಷಿ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿಯಿದೆ.

ಸಹಿ/-

4 ನೇ ಹೆಚ್ಚುವರಿ ಸಿವಿಲ್ ನ್ಯಾ. ಹಾಗೂ

ಜೆ ಎಮ್ ಎಫ್ ಸಿ, ಬೆಳಗಾವಿ